ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ    ದಿನಾಂಕ : DATE: 8/1/2020

# ‘ವರ್ಗಗಳ ನಡುವೆ ವಿಭಜನೆ ಅಪಾಯಕಾರಿ’

## ಆರು ಮಂದಿ ಸಾಧಕರಿಗೆ 2019ನೇ ಸಾಲಿನ ಇನ್ಫೋಸಿಸ್ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ



ಬೆಂಗಳೂರಿನಲ್ಲಿ ಮಂಗಳವಾರ ನೊಬೆಲ್ ಪುರಸ್ಕೃತ ಅರ್ಥಶಾಸ್ತ್ರಜ್ಞ ಪ್ರೊ.ಅಮರ್ತ್ಯ ಸೇನ್ ಅವರು (ಎಡದಿಂದ 5ನೆಯವರು) ವಿವಿಧ ಕ್ಷೇತ್ರಗಳ ಸಾಧಕರಾದ (ಎಡದಿಂದ) ಸಿದ್ಧಾರ್ಥ ಮಿಶ್ರಾ, ಆನಂದ ಪಾಂಡ್ಯನ್, ಮಂಜುಳಾ ರೆಡ್ಡಿ, ಜಿ.ಮುಗೇಶ್, ಸುನಿತಾ ಸರವಗಿ ಮತ್ತು ಪಾರ್ವತಿ ಮನು ದೇವದೇವನ್ ಅವರಿಗೆ ಇನ್ಫೋಸಿಸ್ ಪ್ರಶಸ್ತಿ ಪ್ರದಾನ ಮಾಡಿದರು. ಎನ್.ಆರ್.ನಾರಾಯಣ ಮೂರ್ತಿ, ಎಸ್.ಡಿ. ಶಿಬುಲಾಲ್ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಗುಂಪು ಮತ್ತು ವರ್ಗಗಳ ನಡುವಿನ ವಿಭಜನೆ ಸಾಮಾಜಿಕ ಜೀವನವನ್ನು ಹಾಳು ಮಾಡುವುದರ ಜತೆಗೆ, ದೇಶದಲ್ಲಿ ಬುದ್ಧಿಮತ್ತೆಯ ಪ್ರಗತಿಗೆ ತೊಡಕಾಗಿ ಪರಿಣಮಿಸಬಹುದು ಎಂದು ನೊಬೆಲ್ ಪುರಸ್ಕೃತ ಅರ್ಥಶಾಸ್ತ್ರಜ್ಞ ಪ್ರೊ.ಅಮರ್ತ್ಯ ಸೇನ್ ಎಚ್ಚರಿಸಿದರು.

ನಗರದಲ್ಲಿ ಮಂಗಳವಾರ ಆರು ಮಂದಿ ಸಾಧಕರಿಗೆ 2019ನೇ ಸಾಲಿನ ಇನ್ಫೋಸಿಸ್ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಸ್ನೇಹದ ಸಕಾರಾತ್ಮಕ ಪರಿಣಾಮ ರಾಷ್ಟ್ರೀಯ ಗಡಿಯಲ್ಲಿ ಮಾತ್ರವಲ್ಲದೆ, ದೇಶದ ಒಳಗೂ ಕೆಲಸ ಮಾಡುತ್ತದೆ' ಎಂದು ಕಿವಿಮಾತು ಹೇಳಿದರು.

‘ಸ್ನೇಹ ಮತ್ತು ಜ್ಞಾನದ ನಡುವೆ ಆಳವಾದ ಸಂಪರ್ಕವಿದೆ. ನಾವು ಪರಸ್ಪರರಿಂದ ಕಲಿತಾಗ ನಮ್ಮ ಬುದ್ಧಿಮತ್ತೆ ವಿಸ್ತಾರವಾಗುತ್ತದೆ. ನಾವು ಜಗತ್ತಿನಿಂದ ಪಡೆಯುವುದಕ್ಕಿಂತ ಹೆಚ್ಚು ನೀಡಬಹುದು' ಎಂದರು.

‘ಗ್ರೀಸ್, ಬ್ಯಾಬಿಲೋನ್ ಮತ್ತು ರೋಮ್‌ನಲ್ಲಿ ನಡೆದ ಬುದ್ಧಿಮತ್ತೆಯ ಬೆಳವಣಿಗೆಯ ಪ್ರಭಾವ ಐದನೇ ಶತಮಾನದ ನಂತರ ಆರ್ಯಭಟ ನೇತೃತ್ವದಲ್ಲಿ ನಡೆದ ಗಣಿತದ ಕ್ರಾಂತಿಗೆ ಕಾರಣವಾಯಿತು. ಆದರೆ, ಆರ್ಯಭಟನ ಗಣಿತ, ಭಾರತದಲ್ಲಿ ಬಹುದೊಡ್ಡ ಯಶಸ್ಸು ಸಾಧಿಸಿತು. ನಂತರ ವಿದೇಶಗಳಲ್ಲಿ ಪಸರಿಸಿ ಚೀನಾ ಮತ್ತು ಅರಬ್ ಜಗತ್ತಿನಲ್ಲಿ, ಕೊನೆಗೆ ಯೂರೋಪ್ ಮೇಲೆ ಭಾರಿ ಪ್ರಭಾವ ಬೀರಿತು' ಎಂದು ಅವರು ವಿವರಿಸಿದರು.

ಎಂಜಿನಿಯರಿಂಗ್ ಮತ್ತು ಕಂಪ್ಯೂಟರ್ ವಿಜ್ಞಾನಕ್ಕಾಗಿ ಪ್ರೊ.ಸುನಿತಾ ಸರವಗಿ, ಮಾನವೀಯತೆಗಾಗಿ ಮನು ವಿ.ದೇವದೇವನ್ (ಅವರ ಪರವಾಗಿ ಪತ್ನಿ ಪಾರ್ವತಿ ಪ್ರಶಸ್ತಿ ಪಡೆದರು), ಜೀವ ವಿಜ್ಞಾನ ಸಾಧನೆಗಾಗಿ ಮಂಜುಳಾ ರೆಡ್ಡಿ, ಗಣಿತ ವಿಜ್ಞಾನಕ್ಕಾಗಿ ಸಿದ್ಧಾರ್ಥ ಮಿಶ್ರಾ, ಭೌತಿಕ ವಿಜ್ಞಾನಕ್ಕಾಗಿ ಜಿ.ಮುಗೇಶ್ ಹಾಗೂ ಸಾಮಾಜಿಕ ವಿಜ್ಞಾನಕ್ಕಾಗಿ ಆನಂದ ಪಾಂಡ್ಯನ್ ಅವರು ಪ್ರಶಸ್ತಿ ಸ್ವೀಕರಿಸಿದರು. ಪ್ರಶಸ್ತಿ ತಲಾ 1 ಲಕ್ಷ ಡಾಲರ್ (ಅದಕ್ಕೆ ಸರಿಸಮನಾದ ಭಾರತೀಯ ನಗದು-ಸುಮಾರು ₹ 72 ಲಕ್ಷ), ಚಿನ್ನದ ಪದಕ ಒಳಗೊಂಡಿದೆ.

ಪ್ರಶಸ್ತಿ ಪುರಸ್ಕೃತರ ತೀರ್ಪುಗಾರರ ಜತೆಗೆ ಇನ್ಫೋಸಿಸ್ ವಿಜ್ಞಾನ ಫೌಂಡೇಶನ್‌ನ ಅಧ್ಯಕ್ಷ ಎಸ್.ಡಿ.ಶಿಬುಲಾಲ್, ಟ್ರಸ್ಟಿಗಳ ಮಂಡಳಿಯ ಅಧ್ಯಕ್ಷ ಎನ್.ಆರ್.ನಾರಾಯಣ ಮೂರ್ತಿ, ನಂದನ್ ನಿಲೇಕಣಿ,

> **ಧರ್ಮದ ಆಧಾರದಲ್ಲಿ ಪೌರತ್ವ ನೀಡುವುದು ಅಸಾಂವಿಧಾನಿಕ, ಸುಪ್ರೀಂ ಕೋರ್ಟ್ ಈ ಕಾಯ್ದೆಯನ್ನು ರದ್ದುಪಡಿಸಬೇಕು**
>
> **ಪ್ರೊ.ಅಮರ್ತ್ಯ ಸೇನ್**
> ನೊಬೆಲ್ ಪುರಸ್ಕೃತ ಅರ್ಥಶಾಸ್ತ್ರಜ್ಞ

ಟಿ.ವಿ.ಮೋಹನ್‌ದಾಸ್ ಪೈ, ಎಸ್. ಗೋಪಾಲಕೃಷ್ಣನ್, ಕೆ.ದಿನೇಶ್, ಶ್ರೀನಾಥ್ ಬಟ್ನಿ ಇದ್ದರು.

**ಸಿಎಎ ಒಂದೇ ಕಾರಣ ಅಲ್ಲ:** ಜೆಎನ್‌ಯುನಲ್ಲಿ ನಡೆದ ವಿದ್ಯಮಾನ ಸಹಿತ ದೇಶದಲ್ಲಿ ಇಂದು ವಿದ್ಯಾರ್ಥಿಗಳು ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆಗೆ ಇಳಿದಿರುವುದರ ಬಗ್ಗೆ ಅಮರ್ತ್ಯ ಸೇನ್ ಪ್ರಸ್ತಾಪಿಸಿ, ಪೌರತ್ವ (ತಿದ್ದುಪಡಿ) ಕಾಯ್ದೆ ವಿಚಾರಕ್ಕೆ ಮಾತ್ರವೇ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುತ್ತಿಲ್ಲ, ಅದಕ್ಕೆ ಇನ್ನೂ ಹಲವಾರು ಕಾರಣ ಇರುವುದು ನಿಶ್ಚಿತ ಎಂದರು.

### ಇಬ್ಬರು ಕನ್ನಡಿಗ ಸಾಧಕರು

ಪ್ರಶಸ್ತಿ ಪಡೆದವರಲ್ಲಿ ಇಬ್ಬರು ಕನ್ನಡಿಗರು ಅಥವಾ ಕನ್ನಡ ನೆಲದೊಂದಿಗೆ ನಂಟು ಹೊಂದಿರುವವರು ಎಂಬುದು ವಿಶೇಷ. ಪ್ರೊ. ಜಿ.ಮುಗೇಶ್ ಬೆಂಗಳೂರಿನ ಐಐಎಸ್‌ಸಿ ಅಜೈವಿಕ ಮತ್ತು ಭೌತಿಕ ರಸಾಯನ ವಿಜ್ಞಾನ ವಿಭಾಗದ ಪ್ರೊಫೆಸರ್. ಮಾನವೀಯತೆ ವಿಭಾಗದಲ್ಲಿ ಪ್ರಶಸ್ತಿ ಪಡೆದಿರುವ ಪ್ರೊ.ಮನು ವಿ.ದೇವದೇವನ್ ಕನ್ನಡ ಸಹಿತ ಹಲವು ಭಾಷೆಗಳನ್ನು ಬಲ್ಲವರು. ಕನ್ನಡದಲ್ಲೂ ಹಲವು ಪುಸ್ತಕಗಳನ್ನು ಬರೆದಿದ್ದಾರೆ.

6